ರಾಜ್ಯದಲ್ಲಿ ಸಾಕ್ಷರತಾ ಮಟ್ಟ

2601(2946) ಶ್ರೀ ರಾಜುಗೌಡ ಜಿ.(ಹನ್ನೂರು) :— ಮಾನ್ಯ ವಯಸ್ಕರ ಶಿಕ್ಷಣ, ಗಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಸಾಕ್ಷರತೆಯ ಸರಾಸರಿ ಮಟ್ಟ ಎಷ್ಟು;

ಆ) ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಸಾಕ್ಷರತೆಯ ಮಟ್ಟ ಇದೆ;

ಇ) ರಾಜ್ಯ ಸರಾಸರಿಗಿಂತ ಕಡಿಮೆ ಇರುವ ಜಿಲ್ಲೆಯಲ್ಲಿ ಅದರ ಹೊರತೆಯನ್ನು ನೀಗಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಾಬುರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು) :—

ಅ) ಶೇಕಡ 67.04

ಆ) ಜಿಲ್ಲಾವಾರು ಸಾಕ್ಷರತಾ ಮಟ್ಟ ಈ ಕೆಳಗಿನಂತಿದೆ.

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಸಾಕ್ಷರತಾ ಮಟ್ಟ |
|---|---|---|
| 1. | ಬೆಳಗಾಂ | 64.42 |
| 2. | ಬಾಗಲಕೋಟೆ | 57.81 |
| 3. | ಬಿಜಾಪುರ | 57.46 |
| 4. | ಗುಲ್ಬರ್ಗಾ | 50.65 |
| 5. | ಬೀದರ್ | 81.98 |
| 6. | ರಾಯಚೂರು | 49.54 |
| 7. | ಕೊಪ್ಪಳ | 55.02 |
| 8. | ಗದಗ | 66.27 |
| 9. | ಧಾರವಾಡ | 71.87 |
| 10. | ಉತ್ತರ ಕನ್ನಡ | 76.59 |
| 11. | ಹಾವೇರಿ | 68.09 |
| 12. | ಬಳ್ಳಾರಿ | 58.04 |
| 13. | ಚಿತ್ರದುರ್ಗ | 64.86 |

| ೧ | ೨ | ೩ |
|---|---|---|
| 14. | ದಾವಣಗೆರೆ | 67.67 |
| 15. | ಶಿವಮೊಗ್ಗ | 74.86 |
| 16. | ಉಡುಪಿ | 79.87 |
| 17. | ಚಿಕ್ಕಮಗಳೂರು | 72.63 |
| 18. | ತುಮಕೂರು | 67.19 |
| 19. | ಕೋಲಾರ | 63.14 |
| 20. | ಬೆಂಗಳೂರು | 83.91 |
| 21. | ಬೆಂಗಳೂರು (ಗ್ರಾ) | 65.00 |
| 22. | ಮಂಡ್ಯ | 61.21 |
| 23. | ಹಾಸನ | 68.75 |
| 24. | ದಕ್ಷಿಣ ಕನ್ನಡ | 83.47 |
| 25. | ಕೊಡಗು | 78.17 |
| 26. | ಮೈಸೂರು | 63.69 |
| 27. | ಚಾಮರಾಜನಗರ | 51.26 |

ಇ) ರಾಜ್ಯದಲ್ಲಿ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ರಾಜ್ಯ ಸರ್ಕಾರ ಪ್ರಾಯೋಜಿತ ಸಾಕ್ಷರತಾ ಕಾರ್ಯಕ್ರಮ ಮತ್ತು ತೆರೆದ ಶಾಲೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

*ರಾಜ್ಯದಲ್ಲಿರುವ ಸರ್ಕಾರಿ ಪಾಲಿಕ್ಲಿನಿಕ್‌ಗಳ ಸಂಖ್ಯೆ*

2602 (3016) ರಾಜುಗೌಡ ಜಿ. (ಹನ್ನೂರು) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಲ್ಲಿ ಪಾಲಿಕ್ಲಿನಿಕ್ ಆರಂಭವಾಗಿದೆ; ಇದರ ಉದ್ದೇಶವೇನು;

ಆ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ಸೌಲಭ್ಯವನ್ನು ವಿಸ್ತರಿಸಲು ಸಾಧ್ಯವೇ?

ಶ್ರೀ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಸರ್ಕಾರಿ ಪಾಲಿಕ್ಲಿನಿಕ್ ಯಾವ ಜಿಲ್ಲೆಯಲ್ಲಿಯೂ ಸಹ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.